**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 290/2013 | ಸಿಡಬ್ಲ್ಯೂ -1 | ಪಿ.ಡಬ್ಲ್ಯೂ -1 |
|---|---|---|

ಸಾಕ್ಷಿದಾರರ ಹೆಸರು : ಉಮಾ
ಗಂಡನ ಹೆಸರು : ವೆಂಕಟೇಶ್
ವಯಸ್ಸು : 27 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಚಿಲ್ಲದಹಳ್ಳಿಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 21.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ನನ್ನ ಗಂಡ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಅವರು ಅಗಸರಹಳ್ಳಿ ಗ್ರಾಮದವರು. ಚಾಸಾ 2 ರವಿ ನನ್ನ ಚಿಕ್ಕಪ್ಪ. ಚಾಸಾ 3 ಜಯರಾಮು ನನ್ನ ಭಾವ. 10 ವರ್ಷಗಳ ಹಿಂದೆ ಸಂಜೆ 5 ಗಂಟೆ ಸಮಯದಲ್ಲಿ ಅಗಸರಹಳ್ಳಿ ಗ್ರಾಮದವರು ಟ್ರಾನ್ಸಫಾರ್ಮರ್ ರಿಪೇರಿಗೆ ನನ್ನ ಗಂಡನನ್ನು ಕರೆದುಕೊಂಡು ಹೋಗಿದ್ದರು. ನನ್ನ ಗಂಡ ಬರುವುದಿಲ್ಲ ಎಂದರೂ ಕೂಡ ಅವರು ಕರೆದುಕೊಂಡು ಹೋಗಿದ್ದರು. ಟ್ರಾನ್ಸಫಾರ್ಮರ್ ರಿಪೇರಿ ಮಾಡುವ ಕಾಲಕ್ಕೆ ನನ್ನ ಗಂಡನಿಗೆ ವಿದ್ಯುತ್ ತಗುಲಿ ತೀವ್ರ ಸ್ವರೂಪದ ಗಾಯಗಳಾದವು. ನನ್ನ ಗಂಡ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಿನಾಂಕ 07-07-2012 ರಂದು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು. ಅಗಸರಹಳ್ಳಿ ಗ್ರಾಮದವರಿಂದ ತಪ್ಪಿನಿಂದ ನನ್ನ ಗಂಡ ಮೃತಪಟ್ಟಿರುತ್ತಾರೆ. ಆ ಬಗ್ಗೆ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಸ್ಥಳ ಪಂಚನಾಮೆಯನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಪಾಪೇಗೌಡ ಮತ್ತು ಬೋರೇಗೌಡರವರು ಹಾಜರಿದ್ದರು. ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು ಕೂಡ ನೀಡಿರುತ್ತೇನೆ.

**ಪಾಟೀ ಸವಾಲು ಃ- ಆರೋಪಿತರ ಪರ ಶ್ರೀ ಕೆ.ಆರ್.ಎಂ ವಕೀಲರಿಂದ**

ನನ್ನ ಗಂಡನಿಗೆ ವಿದ್ಯುತ್ ವೈರ್ ತಗುಲಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಆ ಸಮಯದಲ್ಲಿ ಸ್ಥಳದಲ್ಲಿ ಯಾರು ಯಾರು ಹಾಜರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ಗಂಡ ವ್ಯವಸಾಯವನ್ನು ಹೊರತುಪಡಿಸಿ ಮೋಟಾರು ರಿಪೇರಿ ಅಥವಾ ಲೈಟ್ ಕಂಬವನ್ನು ಹತ್ತುವ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಪರಿಹಾರಕ್ಕೋಸ್ಕರ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಾ .

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.